<u>ಅಸಲು ದಾವಾ ಸಂಖ್ಯೆ- **199/2019**</u>　　　　<u>ಪಿ.ಡಬ್ಲ್ಯೂ:-</u> **1**

ದಿನಾಂಕಃ **11-08-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ಸರ್ವೇ ನಂ.258/ಪಿ1 ರಲ್ಲಿ ಸಾಸ್ವೇಹಳ್ಳಿ ಮತ್ತು ಚನ್ನಗಿರಿ ರಸ್ತೆ ಸುಮಾರು 100 ಅಡಿ ಅಗಲ ಮತ್ತು ಉದ್ದ 120 ಅಡಿ ಹಾದುಹೋಗಿದ್ದರಿಂದ ಸದರಿ ಆಸ್ತಿಯು 1 ನೇ ಪ್ರತಿವಾದಿಯ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಚರಂಡಿಯನ್ನು ಸಹ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಗ್ರಾಮ ಪಂಚಾಯಿತಿಯವರು 20 ಇಂಟು 1500 ಅಡಿಯ ತಾರೆ ಮರದ ರಸ್ತೆಯನ್ನು ನಿರ್ಮಾಣ ಮಾಡಿದ್ದು ಮತ್ತು ಸದರಿ ಆಸ್ತಿಯು 1 ನೇ ಪ್ರತಿವಾದಿಯ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಸರ್ವೇ ನಂ.258/ಪಿ1 ರಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಮನೆ ಅಂದಾಜು ಎಷ್ಟು ವಿಸ್ತೀರ್ಣದಲ್ಲಿ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಮನೆಯ ಮುಂಭಾಗದಲ್ಲಿ 25 ಇಂಟು 80 ಅಡಿ ವಿಸ್ತೀರ್ಣದ ರಸ್ತೆ ಮತ್ತು ಚರಂಡಿಯನ್ನು ಗ್ರಾಮ ಪಂಚಾಯಿತಿಯವರು ನಿರ್ಮಾಣ ಮಾಡಿದ್ದರಿಂದ ಸದರಿ ಆಸ್ತಿಯಲ್ಲಿ 1 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಸದರಿ ಸರ್ವೇ ನಂಬರ್ ನ ಮನೆಯನ್ನು ನಾನು ಹುಟ್ಟುವ ಪೂರ್ವದಲ್ಲಿ ಕಟ್ಟಿದ್ದರು. ನಾನು 1992 ರಲ್ಲಿ ಜನಿಸಿರುತ್ತೇನೆ. ಸಾಕ್ಷಿಗೆ ನೀವು 1 ನೇ ಪ್ರತಿವಾದಿಯ ಮನೆಗೆ ಸುಮಾರು 20 ಬಾರಿ ಹೋಗಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಸಾಕಷ್ಟು ಬಾರಿ ಹೋಗಿದ್ದೇನೆ ಎಂದು ನುಡಿಯುತ್ತಾರೆ. ನಾನು ಈಗ್ಗೆ 5-6 ವರ್ಷಗಳಿಂದ 1 ನೇ ಪ್ರತಿವಾದಿಯ ಮನೆಗೆ ಹೋಗಿರುವುದಿಲ್ಲ. ದಾವಾ ಆಸ್ತಿಯ ಹತ್ತಿರ ನಾನು ಈಗ್ಗೆ 5-6 ವರ್ಷಗಳಿಂದ ಹೋಗದೇ ಇದ್ದ ಕಾರಣ ಅಲ್ಲಿ ಏನು ಇದೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. 1 ನೇ

ಪ್ರತಿವಾದಿಯ ಮನೆಯ ಮುಂಭಾಗದಲ್ಲಿ ಬೇರೆಯವರಿಗೆ ಸೇರಿದ ಮನೆಗಳು ಇರುತ್ತವೆ. ಸದರಿ ಮನೆಗಳು ಯಾರಿಗೆ ಸೇರಿದ್ದು ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿಯ ಮನೆಯು ಯಾವ ದಿಕ್ಕಿಗೆ ಇದೆ ಎಂದು ನನಗೆ ಗೊತ್ತಿಲ್ಲ. ಹಿರೇಬಾಸೂರು ಮಂಜಪ್ಪ ಮತ್ತು ನಿಂಗಪ್ಪರವರು 1 ನೇ ಪ್ರತಿವಾದಿಯ ಮನೆಯ ಮುಂಭಾಗದ ದಕ್ಷಿಣ ದಿಕ್ಕಿನಲ್ಲಿ ಇವೆ ಎಂದರೆ ಸರಿಯಲ್ಲ. ನಿಪಿ-3 ರಿಂದ 5 ಆರ್ ಟಿ ಸಿ ಯಲ್ಲಿ ಕಲಂ ನಂ.12 ರಲ್ಲಿ ಮಂಜಪ್ಪ ಬಿನ್ ತಿಮ್ಮಪ್ಪರವರು 1 ಎಕರೆಯಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ದಾಖಲಾತಿಗಳನ್ನು ನಾವೇ ಹಾಜರುಪಡಿಸಿರುತ್ತೇವೆ. 1 ನೇ ಪ್ರತಿವಾದಿಯ ಮನೆಯ ಮುಂಭಾಗದಲ್ಲಿರುವ ಮನೆಯು ಮಂಜಪ್ಪ ಬಿನ್ ತಿಮ್ಮಪ್ಪರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಅವರ ಅಕ್ಕತಂಗಿಯವರು ಅವರ ಮದುವೆಗೋಸ್ಕರ ಮಂಜಪ್ಪ ಬಿನ್ ತಿಮ್ಮಪ್ಪರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಆದ ಕಾರಣ ಮಂಜಪ್ಪ ಬಿನ್ ತಿಮ್ಮಪ್ಪರವರು ಸದರಿ ಆಸ್ತಿಯಲ್ಲಿ ಮನೆಯನ್ನು ಕಟ್ಟಿಕೊಂಡು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಅವರ ಅಕ್ಕತಂಗಿಯರು ಮದುವೆಯ ಸಾಲವನ್ನು ತೀರಿಸುವ ಸಲುವಾಗಿ 1 ನೇ ಪ್ರತಿವಾದಿಯು ನಿಂಗಪ್ಪರವರಿಗೆ 20 ಗುಂಟೆ ಜಮೀನನ್ನು ಮಾರಾಟ ಮಾಡಿದ್ದು ಸದರಿ ಆಸ್ತಿಯಲ್ಲಿ 1 ನೇ ಪ್ರತಿವಾದಿ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಮಂಜಪ್ಪ ಮತ್ತು ನಿಂಗಪ್ಪರವರು ಸರ್ವೇ ನಂ.258/ಪಿ1 ರಲ್ಲಿ 1 ಎಕರೆ 20 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಈಡಿಗರ ಸತೀಶ, ಲಕ್ಷ್ಮಣಪ್ಪ, ನಿಂಗಾಕಳಿ ಹನುಮಂತಪ್ಪ ಮತ್ತು ಮೂರ್ತ್ಯಪ್ಪರವರ ತಲಾ 8 ಗುಂಟೆ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಸಹ 1 ನೇ ಪ್ರತಿವಾದಿಯು ನನ್ನ ತಾಯಿ ಮತ್ತು ಅವರ ಅಕ್ಕತಂಗಿಯರ ಮದುವೆ ಮತ್ತು ಮನೆಯ ಖರ್ಚುವೆಚ್ಚಗಳ ಸಲುವಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈಡಿಗರ ಸತೀಶ, ಲಕ್ಷ್ಮಣಪ್ಪ, ನಿಂಗಾಕಳಿ ಹನುಮಂತಪ್ಪ ಮತ್ತು ಮೂರ್ತ್ಯಪ್ಪರವರು ಕೆಂಪು ಹಂಚಿನ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂ.258/ಪಿ1 ರಲ್ಲಿ ಉತ್ತರ ದಿಕ್ಕಿನಲ್ಲಿ ಭದ್ರಾ ಚಾನಲ್ ಹಾದುಹೋಗಿದ್ದು ಮತ್ತು ಅದರ ಎರಡು

ಬದಿಯಲ್ಲಿ ರಸ್ತೆ ಇದ್ದು ಅಂದಾಜು 40 ಇಂಟು 80 ಅಡಿ ಇರುತ್ತದೆ ಮತ್ತು ಸದರಿ ಆಸ್ತಿಯು ಸಹ 1 ನೇ ಪ್ರತಿವಾದಿಯ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನಮ್ಮ ತಾಯಿ ಮತ್ತು ಅವರ ಅಕ್ಕತಂಗಿಯರ ಮದುವೆಗೋಸ್ಕರ 1 ಎಕರೆ 5 ಗುಂಟೆ ಜಮೀನನ್ನು ಬೂಸೇನಹಳ್ಳಿ ಹನುಮಂತಪ್ಪರವರಿಗೆ ಮಾರಾಟ ಮಾಡಿದ್ದು ಮತ್ತು ಸದರಿ ಆಸ್ತಿಯಲ್ಲಿ 1 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.258/ಪಿ1 ರಲ್ಲಿ 1 ನೇ ಪ್ರತಿವಾದಿಯು 1 ಎಕರೆ 20 ಗುಂಟೆ ಜಮೀನಿನಲ್ಲಿ ಮಾತ್ರ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಭೀಮಯ್ಯ ಎಂಬುವವರು ನಮ್ಮ ತಾಯಿಗೆ ದೊಡ್ಡಪ್ಪರಾಗಬೇಕು. ಭೀಮಯ್ಯರವರಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಪಿತ್ರಾರ್ಜಿತ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಈ ಬಗ್ಗೆ ನನ್ನ ತಾಯಿಯಿಂದ ಮಾಹಿತಿಯನ್ನು ಕೇಳಿ ತಿಳಿದುಕೊಂಡಿರುತ್ತೇನೆ. ತಿಮ್ಮಯ್ಯ ಬಿನ್ ಭೀಮಯ್ಯರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಿಪಿ-2 ರಲ್ಲಿ ಸರ್ವೆ ನಂ.248 ರಲ್ಲಿ 2 ಎಕರೆ 20 ಗುಂಟೆ ಮತ್ತು ಸರ್ವೆ ನಂ.258 ರಲ್ಲಿ 3 ಎಕರೆ 7 ಗುಂಟೆ ಮತ್ತು ಗೋವಿಂದಯ್ಯ ಬಿನ್ ಮಾದಯ್ಯರವರಿಗೆ ಸರ್ವೆ ನಂ.248 ರಲ್ಲಿ 3 ಎಕರೆ 15 ಗುಂಟೆ ಮತ್ತು ಸರ್ವೆ ನಂ.258 ರಲ್ಲಿ 3 ಎಕರೆ 8 ಗುಂಟೆ ಜಮೀನನ್ನು ಈ ದಾವೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಮೂಲತಃ ಕುಳಗಟ್ಟೆ ಹನುಮಂತ ದೇವರುರವರಿಗೆ ಸೇರಿದ ಜಮೀನು ಎಂದರೆ ಸರಿ. ದಾವಾ ಆಸ್ತಿಯು ನಮ್ಮ ತಾಯಿಯ ತಂದೆಯಾದ ಮಾದಯ್ಯರವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ಆದರೆ ಯಾವಾಗ ಮಂಜೂರಾಗಿದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.